ತುರುಕಿದ. ಬಳಿಕ ನಾಲ್ಕು ದಿಕ್ಕಿಗೂ ನೋಡಿದ. ಏನಿದೆ ದಾರಿ! ಸುರಕ್ಷಿತವಾಗಿ ಪಾರಾಗಲು?... ಹೊರಗೆ ಶಬ್ದ! ಅಗಳಿ ತುಂಡಾಗುವುದರಲ್ಲಿದೆ!... ಕಠಾರಿಯನ್ನು ಸಿಕ್ಕಿಸಿ ಸರ್ವಶಕ್ತಿಯನ್ನು ಉಪಯೋಗಿಸಿ ಆತ ಕಿಟಕಿಯ ಸರಳುಗಳನ್ನು ಸೀಸದ ದಂಡವೋ ಎಂಬಂತೆ ಅತ್ತಿತ್ತ ಬಾಗಿಸಿ ಮೇಲೆ ಹತ್ತಿದ. ತಲೆ, ದೇಹಗಳನ್ನು ಹೊರಗೆ ಹಾಕಿದ. ಕಬ್ಬಿಣದ ಸರಳುಗಳನ್ನು ಹಿಡಿದು ನೇತಾಡಿ ಹೊರಗೆ ಬಂದ. ಹೊರಗಡೆ ಅಗಾಧ ಕಾರಿರುಳು! ಮುಂಭಾಗದಲ್ಲಿ ಬಾಗಿಲನ್ನು ಒಡೆಯಲಾಗುತ್ತಿದೆ! ಆಯುಧಧಾರಿ ಪೊಲೀಸರು ಒಳಗೆ ಹೋಗಲು ಪ್ರಯತ್ನಿಸುತ್ತಿದ್ದಾರೆ. ಜಗದೀಶ ಸರಳುಗಳಿಂದ ಕೈ ತೆಗೆದ.

'ಪ್ಲುಂ.'

ಕೆಳಗೆ ಗಟಾರದಲ್ಲಿ ಮೊಣಕಾಲಿನವರೆಗೆ ಕೊಚ್ಚೆ! ಕೀಟಗಳ ಕೂಗು! ದುರ್ಗಂಧ! ಜನರ ಓಟ! ಟಾರ್ಚ್‌ಲೈಟ್ ಬೆಳಕು! ಶಬ್ದಗಳು!

ಜಗದೀಶ ಕಾಲೆಳೆಯುತ್ತ ದಡಕ್ಕೆ ಹತ್ತಿದ. ಬಾಳೆಮೆಳೆಗಳ ಹಾಗೂ ಮುಳ್ಳಿನ ಪೊದೆಗಳ ನಡುವೆ ಆತ ಓಡಿದ. ಹಿಂದಿನಿಂದ ಬೆಳಕು, ವಿಸಿಲು, ಪೊಲೀಸು!

'ಆರ್ಭಟ! ಭಯಾನಕವಾದ ಆರ್ಭಟ!'

'ಹಿಡಿದುಕೊಳ್ಳಿ, ಹಿಡಿದುಕೊಳ್ಳಿ, ಅದೋ ಬರುತ್ತಿದ್ದಾನೆ!'

ಅಡ್ಡಗಟ್ಟಿದವರನ್ನು ಉರುಳಿಸಿ ಬೀಳಿಸಿ, ಜಗದೀಶ ವೇಗವಾಗಿ ಓಡಿದ. ದಾರಿಯ ತಿರುವಿನಲ್ಲಿ ತಿರುಗಿ, ಓಣಿಯಲ್ಲಿ ಆತ ಹೊರಳಿದ. ಮುಂದೆ ಕಂಡ ಗೋಡೆಯನ್ನು ಹಿಡಿದು ಏರಿ ಆಚೆ ಕಡೆಗೆ ಧುಮುಕಿದ. ಏದುಸಿರು ಬಿಡುತ್ತ ಆತ ಗೋಡೆಗೆ ಒರಗಿ ನಿಂತ. ನಿಶ್ಶಬ್ದ! ರಾತ್ರಿ. ಕೆಲವೆಲ್ಲ ಸ್ಪಷ್ಟವಾಗಿ ಕಾಣಿಸುತ್ತಿದೆ. ಒಂದು ಬಾಳೆತೋಟ, ಅದಾರಾಚೆಗೆ ಮನೆ!... ಜಗದೀಶ ಗೋಡೆಗೆ ತಾಕಿಕೊಂಡೆ ಮುಂದಕ್ಕೆ ಸಾಗಿದ. ಕಿಟಕಿಯ ಮೂಲಕ ಒಂದು ಬೆಳಕು, ಸರಳುಗಳಲ್ಲಿ ಜೋತು ಬಿದ್ದಿರುವ ಸೀರೆಗಳು, ಉಡುಪುಗಳು! ಜನರ ಚಲನವಲನ!

ಉಸಿರು ತೆಗೆಯದೆ ಮೆಲ್ಲ ಮೆಲ್ಲಗೆ ಆತ ನಡೆದ. ಎದುರು ದಿಕ್ಕಿನಲ್ಲಿರುವ ಗೋಡೆಯ ಆಚೆ ಕಡೆಗೆ ದಾಟಬೇಕು. ತರಗೆಲೆಗಳ ಮೇಲೆ ಕಾಲುಗಳನ್ನು ಊರುತ್ತ ತೆವಳುತ್ತ ತೆವಳುತ್ತ ಜಗದೀಶ ಮುಂದಕ್ಕೆ ಸಾಗಿದ. ಒಣಗಿದ ಒಂದು ಕಟ್ಟಿಗೆ 'ಟಕ್' ಎಂದು ತುಂಡಾಯಿತು. ಆತ ಬೆಚ್ಚಿದ. ಉಸಿರು ಅಡಗಿ ಅಲುಗಾಡದೆ ನಿಂತಿತು.

ಎಲ್ಲವೂ ನಿಶ್ಶಬ್ದ! ತಕ್ಷಣ ಅಂಗಳಕ್ಕೆ ಬಿದ್ದ ಬೆಳಕಿನಲ್ಲಿ ಜಗದೀಶನಿಗೆ ಕಂಬದಂತೆ ಯಾರೋ ನಿಂತಿರುವುದು ಕಾಣಿಸಿತು. ನೋಡುತ್ತ ನಿಂತ. ದಿಕ್ಕೆಟ್ಟವನಂತೆ ಆತ ನೋಡಿದ. ಬಲಗೈಯಲ್ಲಿ ದೀಪವನ್ನು ಎಡಗೈಯಲ್ಲಿ ಕೊಡವನ್ನು ಹಿಡಿದುಕೊಂಡು ಬೋಡೀಸ್ ಮಾತ್ರ ಧರಿಸಿದ ಒಬ್ಬಾಕೆ ಯುವತಿ!

'ಯಾರದು?' ಭಯ ಭೀತಳಾಗಿ ಅವಳು ಕೇಳಿದಳು. ಜಗದೀಶನಿಂದ ಶಬ್ದ ಬರಲಿಲ್ಲ. ನಾಲಿಗೆ ಹೊರಳುವುದಿಲ್ಲ. ಯುವತಿ ಒಂದಡಿ ಹಿಂದಕ್ಕೆ ಸರಿದಳು.

'ಯಾರು ನೀವು?' ಮುಂದುವರಿದ ಪ್ರಶ್ನೆ. ಅಲ್ಲೆಲ್ಲಾ ಪ್ರತಿಧ್ವನಿಸಿತು. ತಪ್ಪಿಸಿಕೊಳ್ಳಲು ದಾರಿಯಿಲ್ಲ! ಎಡಗಡೆಯಲ್ಲಿ ಬಾವಿ. ಮುಂಭಾಗದಲ್ಲಿ ಭಯದಿಂದ ದಿಟ್ಟಿಸುವ ಅಪರಿಚಿತ ಯುವತಿ!

ಅವನಿಗರಿಯದಂತೆ ಜಗದೀಶನ ಕಾಲುಗಳು ಮುಂದಕ್ಕೆ ಸಾಗಿದವು. ಎಲ್ಲಿಂದಲೋ ಶಬ್ದವೊಂದು ಅಸ್ಪಷ್ಟವಾಗಿ ಆತನ ಕಂಠದಿಂದ ಮೇಲೆದ್ದಿತು:

'ನನ್ನನ್ನು ಕಾಪಾಡಬೇಕು. ನಾನು ಕಳ್ಳನೇನೂ ಅಲ್ಲ!'

ಒಂದಡಿಯಷ್ಟು ಆತ ಮುಂದಡಿಯಿಟ್ಟ. ಅವಳು ದಿಟ್ಟಿಸಿ ನೋಡಿದಳು: ನೀಲಿ ಶರ್ಟು, ಕೆಸರು ಮೆತ್ತಿದ ಪಂಚೆ, ಕೈಯಲ್ಲಿ ಕಾಗದದ ಕಂತೆ.

'ನೀವು ಯಾರು?' ಆಶ್ಚರ್ಯದಿಂದ ಅವಳು ಕೇಳಿದಳು.